# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 56

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 17.08.2026

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ವಿತರಿಸಲು ಸರ್ಕಾರ ಒಂದು ಮೊಟ್ಟೆ ಖರೀದಿಸಲು ನಿಗದಿಪಡಿಸಿರುವ ಮೊತ್ತ ಎಷ್ಟು; | ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನ ಒಂದು ಮೊಟ್ಟೆ ವಿತರಣೆಗೆ ರೂ.6/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ. |
| ಆ) | ಮಾರುಕಟ್ಟೆಯಲ್ಲಿ ಮೊಟ್ಟೆ ದರ ರೂ.7.50 ಇರುವುದರಿಂದ ಇದು ಶಿಕ್ಷಕರಿಗೆ ಆರ್ಥಿಕ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೊಟ್ಟೆಯ ದರ ಮಾರುಕಟ್ಟೆಗಳಲ್ಲಿ ಏಕರೂಪವಾಗಿ ನಿಗದಿಯಾಗಿರುವುದಿಲ್ಲ. ಸ್ಥಳೀಯವಾಗಿ ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೊಟ್ಟೆಯ ದರದಲ್ಲಿ ಏರಿಳಿಕೆಯಾಗುತ್ತದೆ. ವಾರ್ಷಿಕ ಸರಾಸರಿ ದರಗಳನ್ನು ಪರಿಶೀಲಿಸಿದಾಗ ಮೊಟ್ಟೆ ವಿತರಣೆಗೆ ನಿಗದಿಪಡಿಸಲಾಗಿರುವ ದರವು ಸರಿಹೊಂದುತ್ತದೆ.<br>ಪೋಷಕರ ಅಭಿಪ್ರಾಯ ಪಡೆದು ಮೊಟ್ಟೆ ಸೇವಿಸುವ ವಿದ್ಯಾರ್ಥಿಗೆ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸಲಾಗುತ್ತಿದೆ. ವಾಡಿಕೆ/ವೈಯಕ್ತಿಕ ಆಚರಣೆಯಿಂದಾಗಿ ವಿದ್ಯಾರ್ಥಿಗಳು ವಾರದಲ್ಲಿ ಕೆಲವು ದಿನ ಮೊಟ್ಟೆ ಸೇವಿಸುವುದಿಲ್ಲ. ಮೊಟ್ಟೆ ಸೇವಿಸದ ದಿನಗಳಂದು ಅಂತಹ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ನೀಡಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿಗಳು ವಾರದ ಎಲ್ಲಾ ದಿನಗಳಲ್ಲಿ ಮೊಟ್ಟೆಯನ್ನು ಸೇವಿಸದ ಕಾರಣ, ಕೆಲವು ವಿದ್ಯಾರ್ಥಿಗಳು ಮೊಟ್ಟೆ ಸೇವಿಸದೆ ಬಾಳೆಹಣ್ಣು ಸೇವಿಸುವ ಕಾರಣದಿಂದ ಹಾಗೂ ಶಾಲಾ ಹಂತದಲ್ಲಿ ಮೊಟ್ಟೆಯನ್ನು ಸಗಟು ದರಗಳಲ್ಲಿ ಖರೀದಿಸುವುದರಿಂದ ಶಿಕ್ಷಕರಿಗೆ ಆರ್ಥಿಕ ಹೊರೆಯಾಗುವುದಿಲ್ಲ. |
| ಇ) | ಬಂದಿದ್ದಲ್ಲಿ, ಶಿಕ್ಷಕರಿಗೆ ಆರ್ಥಿಕ ಹೊರೆ ತಗ್ಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | |

ಇಪಿ 42 ಎಂಎಂಎಸ್ 2026

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು